ಹಾಗೆ ಮೆರಿಟ್ ಕೋಟಾದಿಂದ ಯಾರು ಆಯ್ಕೆಯಾಗಿದ್ದಾರೆ ಅವರ ಬಗ್ಗೆ ವಿವರಗಳನ್ನು ತರಿಸಿಕೊಂಡು ನಂತರ ಆ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಪಿ. ರಾಮದೇವ್.--ನೀರುದ್ಯೋಗ ಜಾಸ್ತಿಯಾಗುತ್ತಿರುವುದರಿಂದ, ನಿರುದ್ಯೋಗವನ್ನು ಬೆಳೆಸ ತಕ್ಕಂತಹದ್ದು ರಾಜ್ಯ ಸರ್ಕಾರದ ಆಸಕ್ತಿ ಏನು ಇಲ್ಲ ನಾನು ತಿಳಿದುಕೊಂಡಿದ್ದೇನೆ. ಇನ್ನು ಮುಂದೆ ಹೊಸದಾಗಿ ಕಾಲೇಜುಗಳನ್ನು ಕೊಡತಕ್ಕಂತಹದ್ದನ್ನು ಏನಾದರೂ ತಾವು ನಿಲ್ಲಿಸುತ್ತಿರಾ ? ಆ ಬಗ್ಗೆ ಬೇಡಿಕೆ ಏನಾದರು ಬಂದಿದೆಯೇ ?

ಶ್ರೀ ಪಿ. ಜಿ ಆರ್. ಸಿಂಧ್ಯ.—ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನೂ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

ಸ್ಥಳೀಯ ಸಂಸ್ಥೆಗಳ 600 ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಳ್ಳುವ ಬಗ್ಗೆ

258 (766) ಶ್ರೀ ನಾಗರೆಡ್ಡಿ ಲಚಮರೆಡ್ಡಿ (ಸೇಡಂ) -- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೊ .

ಅ) ಸರ್ಕಾರವು 1979 ಮತ್ತು 81ನೇ ಸಾಲುಗಳಲ್ಲಿ ಸ್ಥಳೀಯ ಸಂಸ್ಥೆಗಳ 600 ಆಸ್ಪತ್ರೆಗಳನ್ನು ಮತ್ತು ಅಲ್ಲಿಯ ನೌಕರರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಪೂರ್ಣ ಸರ್ಕಾರಿ ಕಾರಣಕ್ಕಾಗಿ ಪರಾಮರ್ಶಕ ಸಮಿತಿಯನ್ನು ನಿಯೋಜಿಸಲಾಗಿದ್ದು ಈ ಸಮಿತಿಯ ವರದಿ ಮೇಲೆ ಸರ್ಕಾರದವರು ಇಲ್ಲಿಯವರೆಗೆ ಕೈಗೊಂಡ ಕ್ರಮವೇನು.-

ಆ) ಈ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಹಾಗೂ ಇನ್ನುಳಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಮೇಲಿನ ಆಸ್ಪತ್ರೆಗಳ ನೌಕರರಿಗೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆಯೆ ?

ಶ್ರೀ ಪಿ ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು).--
ಸರಕಾರದ ತೀವ್ರ ಪರಿಶೀಲನೆಯಲ್ಲಿದೆ

ವೈದ್ಯಾಧಿಕಾರಿಗಳು	450
ಇತರೆ ನೌಕರರು	1312
ಇಲ್ಲ	

ಶ್ರೀ ನಾಗರೆಡ್ಡಿ ಲಚಮರೆಡ್ಡಿ ಹಾಟೀಲ್.--600 ಆಸ್ಪತ್ರೆಗಳಲ್ಲಿ 450 ವೈದ್ಯಾಧಿಕಾರಿಗಳು ಇದ್ದೆ ಪಕ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದಿರುವ ಪಕ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ತೆಗೆದುಕೊಳ್ಳುವಂತಹ ಕ್ರಮ ಏನು ? ಮತ್ತೆ ಈ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವಂತಹ ವೈದ್ಯಾಧಿಕಾರಿಗಳಿಗೆ ವೇತನ ಶ್ರೇಣಿಯನ್ನು ಇದುವರೆವಿಗೂ ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು ? ಈಗಾಗಲೇ ಇದರಲ್ಲಿ 10ರಿಂದ 15 ಪರ್ಸೆಂಟ್ ಬಿಟ್ಟರ್ಡ್ ಆಗಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.--ಮಾನ್ಯ ಸದಸ್ಯರು ಹೇಳಿದಂತೆ ಗ್ರಾಮಾಂತರ ಪ್ರದೇಶದಲ್ಲೆಲ್ಲ ಇರತಕ್ಕ ತಹ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದೇ ಇರುವುದನ್ನು ನಾನೂ ಒಪ್ಪುತ್ತೇನೆ ಅದಕ್ಕಾಗಿಯೇ ಈ ವರ್ಷ ಬಜೆಟ್ ಮಂಡನೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಅವರು ಕೊನೇಪಕ್ಷ 2 ವರ್ಷಗಳವರೆಗಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕು ಎಂದು ಕಟ್ಟುನಿಟ್ಟಾದ ನಿಯಮವನ್ನು ಜಾರಿಗೆ ತರುವುದರ ಜೊತೆಗೆ ಅದನ್ನು ಪಾಲನೆ ಮಾಡುವಂತಹ ರೀತಿಯಲ್ಲಿ ಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಾರೆ. ಅದನ್ನು ಈ ವರ್ಷ ಕಾರ್ಯಾಚರಣೆಗೆ ತರುತ್ತೇವೆ. ಮತ್ತೆ ವೇತನ ಶ್ರೇಣಿಯ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದ್ದನ್ನು ನಾನೂ ಒಪ್ಪುತ್ತೇನೆ ನಾನು ಅಧಿಕಾರಕ್ಕೆ ಬಂದಮೇಲೆ ಸ್ಕ್ರೀನಿಂಗ್ ರಿಪೋರ್ಟ್‌ನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತಿದ್ದೇನೆ. 2-3 ತಿಂಗಳೊಳಗಾಗಿ ಈ ಬಂದು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಪಿ ರಾಮಚಂದ್ರರಾವ್ —ರಿಟೆರ್ಡ್ ಆದ ಡಾಕ್ಟರ್‌ಗಳಿಗೆ ಏನಾದರೂ ತಾತ್ಕಾಲಿಕವಾದ ಪರಿಹಾರ ಕೊಡುತ್ತೀರಾ. ಡಾಕ್ಟರ್‌ಗಳಿಗೆ ಆಂಟಿಸಿಪೇಟರ್ ಪೆನ್‌ಷನ್‌ನನ್ನು ಏತಕ್ಕೆ ಕೊಡಬಾರದು ?

ಶ್ರೀ ಪಿ ಜಿ. ಆರ್. ಸಿಂಧ್ಯ —ಇದನ್ನು 1979-80ರಲ್ಲಿ ಸರ್ಕಾರಿ ಆಜ್ಞೆ ಮಾಡಿದಾಗ ಆಂಟಿಸಿಪೇಟರ್ ಪೆನ್‌ಷನ್ ಕೊಡಬೇಕಾಗಿತ್ತು. ಈಗ ಕೊಡುವುದರಲ್ಲಿ ಅರ್ಥವಿಲ್ಲವೆಂದು ನಾನು ಸರ್ಕಾರದ ನಿ

ಯಿಂದ ಹೇಳುತ್ತಿದ್ದೇನೆ. ಇನ್ನು ಮೂರು ತಿಂಗಳ ಒಳಗೆ ಶಾಶ್ವತವಾಗಿ ನಮ್ಮ ಸರ್ಕಾರ ಈ ಸಮಸ್ಯೆಗೆ ಪರಿಹಾರ ಮಾಡುತ್ತೇವೆಂದು ಹೇಳುತ್ತೇನೆ.

ಖಾಸಗಿ ನ್ಯಾಯಾಬೆಲೆ ಅಂಗಡಿಗಳನ್ನು ಸರ್ಕಾರ ವಹಿಸಿಕೊಳ್ಳುವ ಬಗ್ಗೆ

262 (99) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ). ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.–

ಅ) ರಾಜ್ಯದಲ್ಲಿರುವ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ಸರ್ಕಾರವೇ ವಹಿಸಿಕೊಳ್ಳುವ ತೀರ್ಮಾನಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಎಷ್ಟು ಖಾಸಗಿ ನ್ಯಾಯಬೆಲೆ ಅಂಗಡಿಗಳಿವೆ ;

ಇ) ಸರ್ಕಾರವೇ ವಹಿಸಿಕೊಳ್ಳಲು ಬದಲಿ ವ್ಯವಸ್ಥೆಯನ್ನು ಸರ್ಕಾರವು ಮಾಡಿರುವುದೇ ;

ಈ) ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿರುವ ಹರಿಜನ, ಗಿರಿಜನ, ಹಾಗೂ ವಿದ್ಯಾವಂತ ನಿರುದ್ಯೋಗಿಗಳಿಗೆ ಮಾಡಿರುವ ಬದಲಿ ವ್ಯವಸ್ಥೆ ಯಾವುದು ;

ಶ್ರೀ ಬಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು —ಅ) ಹೌದು.

ಆ) 5,373

ಇ) ಹೌದು.

ಈ) ಇವರಿಗೆ 30-6-1984 ರವರೆಗೆ ನ್ಯಾಯಬೆಲೆ ಅಂಗಡಿಗಳನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ —ಮಾನ್ಯ ಅಧ್ಯಕ್ಷರೆ. ತಾವು ಖಾಸಗಿ ನ್ಯಾಯ ಬೆಲೆ ಅಂಗಡಿಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದಾಗ ಬದಲಿ ವ್ಯವಸ್ಥೆಯನ್ನು ಸರ್ಕಾರ ಮಾಡಿರುವುದೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ. ಆ ಬದಲಿ ವ್ಯವಸ್ಥೆ ಏನು ಎನ್ನುವುದನ್ನು ನಾನು ತಿಳಿಯುವುದಕ್ಕೆ ಇಚ್ಛೆ ಪಡುತ್ತೇನೆ ಹಾಗೆಯೇ ಹರಿಜನ ಗಿರಿಜನರು ನಡೆಸತಕ್ಕ ಅಂಗಡಿಗಳನ್ನು 30-6-1984 ರವರೆಗೆ ನಡೆಸುವುದಕ್ಕೆ ವಿಸ್ತರಿಸಿದ್ದೇನೆ ಎಂದು ತಾವು ಹೇಳಿದ್ದೀರಿ ಬೇರೆಯವರಿಗೆ ಅಲ್ಲಿಯತನಕ ನಡೆಸುವುದಕ್ಕೆ ಪರವಾನಗಿ ಕೊಟ್ಟಿಲ್ಲವೇ ? ಕೊಟ್ಟಿದ್ದರೆ ಆ ಅಂಗಡಿಗಳನ್ನು ವಶಪಡಿಸಿಕೊಂಡು ಬೇರೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ.—ಖಾಸಗಿ ನ್ಯಾಯ ಬೆಲೆ ಅಂಗಡಿಗಳನ್ನು ವಶ ಪಡಿಸಿಕೊಳ್ಳುವುದಕ್ಕೆ ದಿನಾಂಕ : 1-1-1984 ರಂದು ಸರ್ಕಾರ ಒಂದು ಆಜ್ಞೆ ಹೊರಡಿಸಿತ್ತು. ಆದರೆ 750 ಖಾಸಗಿ ನ್ಯಾಯ ಬೆಲೆ ಅಂಗಡಿಯವರು ಉಚ್ಚ ನ್ಯಾಯಾಲಯಕ್ಕೆ ಹೋಗಿ ತಡೆ ಆಜ್ಞೆ ತಂದಿರುವುದರಿಂದ ನ್ಯಾಯಲಯದ ತಡೆ ಆಜ್ಞೆಗೆ ಮನ್ನಣೆ ಕೊಟ್ಟು ಅದನ್ನು ವೇಕೆಟ್ ಮಾಡುವವರಿಗೆ ಮುಂದುವರಿಸುತ್ತಿದ್ದೇನೆ ಈ ಮಧ್ಯೆ ನಿಮ್ಮನ್ನೆವರ್ಗದವರು, ಪದವೀಧರರು, ಹೆಣ್ಣು ಮಕ್ಕಳು ಸರ್ಕಾರದ ಗಮನಕ್ಕೆ ತಂದು ನಾವು ಇದರಿಂದ ಜೀವನ ನಡೆಸುತ್ತಿದ್ದೇನೆ. ತಾವು ಇದನ್ನು ಮುಂದುವರಿಸಬೇಕೆಂದು ಕೇಳಿಕೊಂಡಾಗ ನಾವು ಈ ಬೇಡಿಕೆಯನ್ನು ಪುನರ್ ಪರಿಶೀಲನೆ ಮಾಡಿ, ದಿನಾಂಕ : 30-6-1984ರ ಅವಧಿಯವರೆಗೆ ವಿಸ್ತರಣೆ ಮಾಡಲಾಯಿತು.

ಇನ್ನು ಎರಡನೆಯದಾಗಿ, ಸರ್ಕಾರ ಏನು ವ್ಯವಸ್ಥೆ ಮಾಡಿದೆ ಎಂದರೆ ಫುಡ್ ಕಾರ್ಪೊರೇಷನ್ ವತಿಯಿಂದ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಹಾಗೂ ಕೋ ಆಪರೇಟಿವ್ ಸೊಸೈಟಿಗಳಿಂದ ಅಂಗಡಿಗಳನ್ನು ತೆರೆಯ ಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಬದಲಿ ವ್ಯವಸ್ಥೆಯನ್ನು ಕ್ರಮಬದ್ಧವಾಗಿ ನಾವು ಮಾಡಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಬದಲಿ ವ್ಯವಸ್ಥೆಯನ್ನು ಮಾಡಿರುವುದಾಗಿ ಹೇಳಿದ್ದೀರಿ, ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದಂತಹ 750 ಅಂಗಡಿಗಳನ್ನು ಬಿಟ್ಟು ಹರಿಜನ ಗಿರಿಜನರು ನಡೆಸತಕ್ಕ ಅಂಗಡಿಗಳನ್ನು ಬಿಟ್ಟು ಉಳಿದ ಅಂಗಡಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬದಲಿ ವ್ಯವಸ್ಥೆಯ ಮುಖಾಂತರ ಏರ್ಪಾಟು ಮಾಡಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸಿಟಿಯಲ್ಲಿ ಈಗಾಗಲೇ ಬದಲಿ ವ್ಯವಸ್ಥೆಯನ್ನು ಮಾಡಲಾಗಿದೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ವಾಸ್ತವಾಂಶ ಸರಿಯಾಗಿದೆ. ಅವರಿಗೂ ಸಹ 30-6-84ರ ವರೆಗೆ ಕಾಲಾವಧಿ ಕೊಟ್ಟಿರುವುದರಿಂದ ಅಲ್ಲಿಯವರೆಗೆ ಕಾಲಾವಕಾಶ ಇದೆ.